**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**MVC 339/24** **RW-01**

ಸಾಕ್ಷಿದಾರರ ಹೆಸರು ಃ ವಾಸುದೇವ ಕುಲಕರ್ಣಿ

ತಂದೆ / ಗಂಡನ ಹೆಸರು ಃ ಪ್ರಕಾಶ

ವಯಸ್ಸು ಃ 44 ವರ್ಷ

ಉದ್ಯೋಗ ಃ ಆಡಳಿತ ಅಧಿಕಾರಿ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ ಪರ ಎ ಎಸ್ ಡಿ ವಕೀಲರಿಂದಃ**

ಶಾ ದೇವಜಿ ಕೇಶವಜಿ ಜಿನ್ನಿಂಗ ಆ್ಯಂಡ ಟ್ರೆಡಿಂಗ ಕಂಪನಿಯಲ್ಲಿ ನಾನು ಆಡಳಿತ ಅಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ. ಶ್ರೀಮತಿ ತಿರುಪತೇಮ್ಮಾ ಜಿನಗುಂಟಪಲ್ಲಿ ಇವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಇಎಸ್ ಐ ಕವರೇಜ ಇತ್ತು ಮತ್ತು ಅವರ ವೇತನದಲ್ಲಿ ಇ ಎಸ್ ಐ ಕಡತ ಆಗುತ್ತಿತ್ತು. ಈ ಕುರಿತು ನಾನು ದಾಖಲೆ ಹಾಜರುಪಡಿಸಿದ್ದು ಇ ಎಸ ಐ ಕಾರ್ಪೋರೇಷನಗೆ ಕೊಟ್ಟ ಮಾಹಿತಿಯ ನೋಟರಿ ಪ್ರತಿಯನ್ನು ನಿಆರ್ -1 ಎಂದು, ಎಕ್ಸಿಡೆಂಟ್ ರಿಪೋರ್ಟ ನೋಟರಿಯ ದೃಡಿಕೃತ ಪ್ರತಿಯನ್ನು ನಿಆರ್ 2 ಎಂದು, ಹಾಜರಾತಿ ದೃಡಿಕರಣ ನೋಟರಿ ಪ್ರತಿಯನ್ನು ನಿಆರ್ 3 ಎಂದು, ಸ್ಯಾಲರಿ ರೆಜಿಸ್ಟರನ ನೋಟರಿ ದೃಢಿಕೃತ ಪ್ರತಿಯನ್ನು ನಿಆರ್ 4 ಎಂದು ಗುರುತಿಸಲಾಯಿತು.

ನಿಆರ್ 1 ರಿಂದ 4 ರ ಮೂಲ ಪ್ರತಿಗಳನ್ನು ನೋಡಿ ನಿಆರ್ 1 ರಿಂದ 4 ನೋಟರಿ ದೃಢಿಕೃತಗಳನ್ನು ನಿಶಾನೆಗಳನ್ನಾಗಿ ಗುರುತಿಸಿ ಪುನಃ ಸಾಕ್ಷಿಗೆ ಮೂಲ ಪ್ರತಿಗಳನ್ನು ಕೊಡಲಾಯಿತು.

ತಿರುಪತೆಮ್ಮಾ ಅವರ ವೇತನದಲ್ಲಿ ಇ ಎಸ್ ಐ ಕಡತ ಆಗುತ್ತಿತ್ತು. ನಾವು ಅಪಘಾತ ವಾದ ನಂತರ ಇ ಎಸ್ ಐ ರವರಿಗೆ ತಿರುಪತೆಮ್ಮಾ ಮರಣ ಹೊಂದಿದ ಬಗ್ಗೆ ಮಾಹಿತಿ ನೀಡಿದ್ದೇವೆ. ತಿರುಪತೆಮ್ಮಾ ನಮ್ಮ ಕಂಪನಿಯಲ್ಲಿ ಸುಮಾರು 8-10 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಇ ಎಸ್ ಐ ರವರು ಏನು ಕ್ಲೆಮಾ ಆಗುವುದಿಲ್ಲಾ ಅಂತಾ ಹೇಳಿರುತ್ತಾರೆ.

ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.